**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು  ಮತ್ತು ಜೆ.ಎಂ.ಎಫ್.ಸಿ.</u>**

**<u>ನ್ಯಾಯಾಲಯ, ರಾಣೇಬೆನ್ನೂರು.</u>**

**<u>C.C No.663/2019</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಕರಿಯಪ್ಪ ಸಾವಕ್ಕನವರ | *P.W-2* |
| ತಂದೆಯ ಹೆಸರು | – | ಶಿವಪ್ಪ | *C.W-2* |
| ವಯಸ್ಸು | – | 30 ವರ್ಷ | |
| ಉದ್ಯೋಗ | – | ಚಾಲಕ | |
| ವಾಸ | – | ಕಾಕೋಳ | |

**<u>ದಿನಾಂಕಃ 16–08–2023 ರಂದು ಸಾಕ್ಷಿದಾರರನ್ನು ಕರೆಯಿಸಿ  ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ</u>**

ದಿಃ 29–10–2018 ರಂದು ಕಾಕೋಳ ಗ್ರಾಮದ ಶ್ರೀ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿ ಸಂಖ್ಯೆ .01 ಮತ್ತು  ಕೊಠಡಿ ಸಂಖ್ಯೆ .05 ರಲ್ಲಿಯ ಕಂಪ್ಯೂಟರಗಳನ್ನು ಬಾಗಿಲಿದ ಬೀಗ ಹೊಡೆದು  ಕಳ್ಳತನ ಮಾಡಿದ್ದಾರೆ ಎನ್ನುವ ಬಗ್ಗೆ ಪೋಲಿಸರು ಪಂಚನಾಮೆ ಮಾಡಿದ್ದಾರೆ ಆ ದಿನ ನಾನು ಬೆಳಿಗ್ಗೆ 7.45 ರಿಂದ 4.30 ಸಮಯದವರೆಗೆ ಪಂಚನಾಮೆ ಮಾಡಿದ್ದಾರೆ ಆಗ ನಾನು ಸಹಿ ಮಾಡಿದ್ದೇನೆ.  ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ. ಅದು ಈಗಾಗಲೇ  ನಿ.ಪಿ–2 ಎಂದು

ಗುರುತಿಸಲಾಗಿರುತ್ತದೆ. ಸದರಿ ನಿ.ಪಿ-2 ರಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಸಮಯದಲ್ಲಿ ನನ್ನ ಜೊತೆ ಶಿವರಾಜ (ಚಾ.ಸಾ-3) ಮತ್ತು ಹನುಮಂತಪ್ಪ ದ್ಯಾವಣ್ಣನವರ (ಫ್ರಾ.ಸಾ-1) ರವರೂ ಸಹ ಸಹಿ ಮಾಡಿದ್ದಾರೆ . ಸದರಿ ಕಾಕೋಳ ಗ್ರಾಮದ ಶ್ರೀ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಹಾಗು ಸದರಿ ಶಾಲೆಯ ಕೊಠಡಿ ಸಂಖ್ಯೆ .01 ಮತ್ತು ಕೊಠಡಿ ಸಂಖ್ಯೆ .05 ಗಳಿಗೆ ಸಂಬಂಧಿಸಿದ ಒಟ್ಟು 6 ಭಾವಚಿತ್ರಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಗುರುತಿಸುತ್ತೇನೆ. ಅವುಗಳು ಈಗಾಗಲೇ ನಿ.ಪಿ-3 ರಿಂದ ನಿ.ಪಿ-8 ಎಂದು ಗುರುತಿಸಲಾಗಿರುತ್ತವೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಸಿ.ಕೆ.ವಕೀಲರಿಂದಃ**

ನನ್ನ ಸ್ವಂತ ಊರು ಕಾಕೋಳ .ನಾನು ಪಂಚನಾಮೆಯ ಸಾಕ್ಷಿದಾರನೆಂದು ಇದೇ ಮೊದಲ ಬಾರಿಗೆ ಸಾಕ್ಷಿ ನುಡಿಯುತ್ತಿದ್ದೇನೆ . ಸದರಿ ನಿ.ಪಿ-2 ರ ಪಂಚನಾಮೆಯಲ್ಲಿ ಏನು ವಿಷಯ ಬರೆದಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲಿಸರ ಹೇಳಿಕೆಯ

ಮೇರೆಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ–2 ರ ಪಂಚನಾಮೆಯಲ್ಲಿ ಏನು ವಿಷಯ ಬರೆದಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರ ಪ್ರಾ.ಸಾ–1 ರವರಿಗೆ ಅನುಕೂಲವಾಗಲಿ ಎಂದು ಹೇಳಿ ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.